**ಪಾಪುಟ್ಟೆಯ ಹೆಸರನ್ನು ಎಲ್ಲೋ ಕೇಳಿದಂತಿತ್ತು. ನನ್ನಲ್ಲಿದ್ದ ತಂತ್ರಾಂಶ 'ಪೂರ್ವಾಪರ'ವನ್ನು ಜಾಲಾಡಿದಾಗ, ಕೆಲ ವರ್ಷಗಳ ಹಿಂದಿನ ಪತ್ರಿಕಾ ವರದಿ ದೊರಕಿತು. ಈ ಮನೆಯಲ್ಲಿ ಹೆಣ್ಣುಗಳ ಅನೈತಿಕ ದಂಧೆ ನಡೆಯುತ್ತಿದೆಯೆಂದು ಪೊಲೀಸರಿಗೆ ಅನುಮಾನವಿತ್ತು. ಆದರೆ ಮೂರ್ನಾಲ್ಕು ಬಾರಿ ಹಠಾತ್ ದಾಳಿ ಮಾಡಿದಾಗಲೂ, ಯಾರೂ ಸಿಗದೇ ಪೊಲೀಸರು ಬರಿಗೈನಲ್ಲಿ ವಾಪಾಸಾಗಿದ್ದರು.**

ಅರ್ಧ ಪಿಂಚಣಿಯಲ್ಲಿರುವ ಬೋಪಣ್ಣ ಸಹಜವಾಗಿ ಅದಕ್ಕೆ ಒಪ್ಪಿಗೆ ನೀಡೋಲ್ಲ ಅನ್ನೋದೂ ಆಕೆಗೆ ಗೊತ್ತು."

"ಆದರೆ ಆ ಕಲೆ ಹೇಗಾಯ್ತು? ಮುಖ್ಯವಾಗಿ, ಆ ಎರಡನೆಯ ಕಲೆ?"

"ಅದು ಹೇಗಾಗಿರಬಹುದು? ಹಾಂ... ಸರಳ! ನಿನ್ನೆ ರಾತ್ರಿ ಪರ್ಸು ಕದ್ದವನು ಅಜಿತ್. ಗಡಿಬಿಡಿಯಲ್ಲಿ ಪರ್ಸು ಎಳೆಯುವಾಗ, ಕಪಾಟಿಗೆ ತಾಗಿ, ಶಾಯಿಯ ಬಾಟಲಿ ಒಡೆದಿದೆ. ಆದರೆ ಎರಡನೆಯ ಕಲೆ ಹೇಗಾಯಿತು ಅನ್ನುವುದು ಅರ್ಥ ಆಗ್ತಾ ಇಲ್ಲ."

"ಬಿದ್ದಪ್ಪ, ಅದು ಕೂಡಾ ಸರಳ! ಆ ಹೊತ್ತಿಗೆ ಸರಿಯಾಗಿ ಬೋಪಣ್ಣ ಮೂತ್ರಶಂಕೆಗಾಗಿ ಹೊರಗಡೆ ಬಂದಿದ್ದಾನೆ. ಕಳ್ಳ ಆ ತಕ್ಷಣ ಆ ಮುಚ್ಚಿದ ಬಾಗಿಲಿನ ಎದುರು ನಿಂತಿದ್ದಾನೆ. ಯಾಕೆ ಗೊತ್ತೆ? ಬೀದಿ ದೀಪ! ಅಜಿತನ ಕೋಣೆಯ ಬಾಗಿಲ ಮೇಲೆ ಆ ಬೀದಿದೀಪ ಸರಿಯಾಗಿ ಬೀಳುತ್ತೆ. ಅಲ್ಲಿ ನಿಂತಿದ್ದರೆ ಕಳ್ಳ ಬಯಲಾಗುತ್ತಾನೆ. ಮುಚ್ಚಿದ ಬಾಗಿಲಿನ ಮೇಲೆ ದೀಪ ಬೀಳುವುದಿಲ್ಲ. ಹಾಗಾಗಿ ಕಳ್ಳ ಅಲ್ಲಿ ತಟಸ್ಥನಾಗಿದ್ದಾನೆ!"

ಬೆಳಿಗ್ಗೆ ಮುಚ್ಚಿದ್ದ ಬಾಗಿಲಿನೆದುರು ನಿಂತು ತುಲನೆ ಮಾಡಿದ ಕರಮಚಂದನ ಚರ್ಯೆಯ ಅರ್ಥ ನನಗೀಗ ಆಯಿತು.

"ಆದ್ರೆ ಸಾಕ್ಷಿ ಇಲ್ಲದೆ ಅಜಿತ್ ಕಳ್ಳನೆನ್ನುವುದು ಹೇಗೆ? ನಾವು ಆ ಪರ್ಸನ್ನು ತಲಾಶು ಮಾಡಲೇಬೇಕು!"

"ನೀನೆನ್ನುವುದು ನಿಜ. ಆ ಪರ್ಸು ಬಹಳ ಮುಖ್ಯವಾಗುತ್ತದೆ. ಜ್ಯುವೆಲ್ಲರಿಯವನ ಸಾಕ್ಷ್ಯವೂ ಸಾಕಾಗಬಹುದು!" ಗಟ್ಟಿಯಾಗಿ ನಗೆ ಚಿಮ್ಮಿಸಿದ ಕರಮಚಂದ.

ಸಂಜೆ ಏಳರ ಹೊತ್ತಿಗೆ ಕರಮಚಂದ ಉಡುಪು ಧರಿಸತೊಡಗಿದ. ನನ್ನ ಕುತೂಹಲದ ನೋಟಕ್ಕೆ ಆತ ಉತ್ತರಿಸಿದ,

"ಬೀದಿದೀಪದ ನನ್ನ ಊಹೆ ಸರಿಯೇ ಎಂದು ಖಾತ್ರಿ ಮಾಡಲಿಕ್ಕಿದೆ. ಲಕ್ಷ್ಮೀ ಜ್ಯೂವೆಲ್ಲರಿಗೆ ಭೇಟಿ ಕೊಡಲಿಕ್ಕಿದೆ. ನಾನು ಬರುವುದು ತಡವಾಗಬಹುದು. ನೀನು ಬೀಗ ಹಾಕಿ ಮಲಗಿಕೋ."

ಒಂದೆರಡು ಕಬ್ಬಿಣದ ತಂತಿಗಳು, ಹಳೆಯ ಬೀಗದ ಕೀಲಿಕೈಗಳ ಗೊಂಚಲುಗಳನ್ನು ಜೇಬಿಗೆ ಸೇರಿಸಿ, ಮೆಟ್ಟಿಲಲ್ಲಿ ಇಳಿದು ಹೋದ ಕರಮಚಂದ. ರಾತ್ರಿಯ ಸಾಹಸಗಳಿಗೆ ಆತ ಏಕಾಂಗಿಯಾಗಿಯೇ ಹೋಗುತ್ತಿದ್ದುದು ಜಾಸ್ತಿ.

★★★